
ಬಿ. ಚಂದ್ರೇಗೌಡ, ಬೆಂಗಳೂರು
ನೀರು ಹೆಣ್ಣೇ ಏಕೆ? ಗಂಡು ಏಕಲ್ಲ?



ಜನ್ಮಸ್ಥಳದಿಂದ ಪರಸ್ಥಳಕ್ಕೆ ತೆರಳಿ ಎರಡೂ ಸ್ಥಳಗಳಿಗೆ ತಂಪೆರೆಯುವ ಗುಣವಿರುವುದು ಹೆಣ್ಣಲ್ಲೇ.

ಪಿ.ಜೆ. ರಾಘವೇಂದ್ರ, ಮೈಸೂರು
'ಮುಖ್ಯಮಂತ್ರಿ'ಯ ವಿರುದ್ಧಪದ 'ಉಪಮುಖ್ಯಮಂತ್ರಿ' ಇರಬಹುದೆ?
ಛೆ! ಹಾಗೆಲ್ಲ ರಾಜ್ಯರಹಸ್ಯವನ್ನು ಹೊರಗೆಡವಬಾರದು ಸರ್.

ಅಮರಯ್ಯಾ ಪತ್ರಿಮಠ, ಸುರಪುರ
ಸ್ನೇಹಿತರೇ ವೈರಿಗಳಾಗಲು ಕಾರಣ?
ಸ್ನೇಹದ ವೈರಿಂಗಲ್ಲಿ ಸ್ವಾರ್ಥದ ಷಾರ್ಟ್ ಸರ್ಕ್ಯೂಟ್ ಸಂಭವಿಸುವುದರಿಂದ.

ಎಂ.ಜಿ. ಉಮಾ, ಬಳ್ಳಾರಿ
ಕೋಪಕ್ಕೂ, ತಾಳ್ಮೆಗೂ ಎಷ್ಟು ದೂರ?



ಕಿವಿಗೂ, ಮೆದುಳಿಗೂ ಇರುವಷ್ಟೇ; ಕೇಳಿದ್ದಕ್ಕೆ ಪ್ರತಿಕ್ರಿಯಿಸಿದರೆ ಕೋಪ; ಚಿಂತನೆಗೆ ಎಡೆಯಿತ್ತರೆ ತಾಳ್ಮೆ.

ಮಲ್ಲಿಕಾರ್ಜುನ, ಸುರಧೇನುಪುರ
ವಿವಾಹ ಭೋಜನ ಅಂತ ಹೋಟೆಲ್ ಯಾಕೆ ಆರಂಭವಾಗಿಲ್ಲ?
ಐನೂರು ರೂಪಾಯಿ ಗಿಫ್ಟ್ ಕೊಟ್ಟು ಸಾವಿರದಷ್ಟು ಕಬಳಿಸುವ ಮಂದಿ ಬಂದಾರೆಂದು.

ಅನಸೂಯ ಟಿ, ಕೇದಿಗೆಮನೆ
ನಿಮ್ಮ ಪ್ರಕಾರ ಮನುಷ್ಯ ಎಷ್ಟು ವರ್ಷ ಬದುಕಿದ್ದರೆ ಸಾಕು?
ಆರೋಗ್ಯ, ನೆಮ್ಮದಿಗಳಿಂದ ಇರುವಷ್ಟು ವರ್ಷ.

ನಾಗೇಂದ್ರ ಗಂಗೊಳ್ಳಿ, ಬೆಂಗಳೂರು
ಕಿಂಗ್ ಪಿನ್ ತರಹ ಕ್ವೀನ್ ಪಿನ್ ಇದೆಯಾ ರಾಮ್‌ಜೀ?
ಇದೆ. ಅದು ಕಿಂಗ್‌ಗೆ ಮಾತ್ರ, ಇತರರಿಗೆ ತಿಳಿಯದಂತೆ, ಚುಚ್ಚುತ್ತದೆ.

ಸಿ.ಕೆ. ಗಣಪ್ಪನವರ, ಮುಂಡರಗಿ
ಈಗೀಗ ಭಗ್ನಪ್ರೇಮಿಗಳ ಸಂಖ್ಯೆ ಕಡಿಮೆಯಾಗಿದೆ ಎನಿಸುತ್ತಿದೆ?
ಎಷ್ಟಿಯಲ್ಲಿ ನೋಡಿ, ವಾಟ್ಸಾಪ್‌ನಲ್ಲಿ ಚಾಟಿಸಿ, ಟ್ವಿಟರ್‌ನಲ್ಲಿ ಟಾಟಾ ಹೇಳುವುದರಿಂದ ಲೆಕ್ಕ ಸಿಗುತ್ತಿಲ್ಲವಂತೆ.

ಬಿ. ಬಸವರಾಜ್, ಹರಿಹರ
ಕೆಲವರು ರತಿಯಂತಹ ಸತಿ ಇದ್ದರೂ ಕೋತಿಯಂತಹವಳ ಹಿಂದೆ ಹೋಗುವುದೇಕೆ?
ಅವಳ ಮಂಗಾಟಗಳಿಗೆ ಮನಸೋಲುವರಂತೆ.

ಮಹಾವೀರ ಕಾಸರ, ಶಿವಮೊಗ್ಗ
ಸಂಚಾರಿ ಪೊಲೀಸರಿಗೆ ಬೀದಿ ನಾಯಿಗಳು, ಬಿಡಾಡಿ ದನಗಳು ಕಾಣುವುದಿಲ್ಲವೆ?
ಕಾಣುತ್ತವಂತೆ; ಅವುಗಳು ಕಚ್ಚಿಯಾವು, ಗುಮ್ಮಿಯಾವು ಎಂದು ಕೆಳಗಿಳಿಯದೆ ಹೋಗಿಬಿಡುವರಂತೆ.

ಎಸ್ಸೆನ್ನೆ, ಕಡೂರು
ರಾಜಕಾರಣಿಗಳು ತುಂಬಾ ವರ್ಷ ಬದುಕಿರಲು ಕಾರಣವೇನು?
ಅವರನ್ನು ಸಮೀಪಿಸಲು ಯಮನಿಗೂ ಜುಗುಪ್ಸೆ ಇದ್ದೀತು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಇತ್ತೀಚೆಗೆ ಜನ 'ಪರಪ್ಪನ ಅಗ್ರಹಾರ' ಎಂದು ಜೋರಾಗಿ ಹೇಳಲೂ ಅಂಜುವುದೇಕೆ?
ಶಿಷ್ಯಭೀತಿ! ದುರ್ಯೋಧನನ ಕಾಲದಿಂದಲೂ ಅಶ್ವತ್ಥಾಮನಂಥ ವಿವೇಕಹೀನ ಶಿಷ್ಯರ ಭಯ ತಪ್ಪಿದ್ದಲ್ಲ.

ದಿನೇಶ್, ಗುಡ್ಡದೂರು
ಆಕಾಶದಲ್ಲೇ ತೇಲುತ್ತಿದ್ದ ಕೆಲವು ಖ್ಯಾತ ನಟರು ಹಿರಿತೆರೆಯಿಂದ ಕಿರಿತೆರೆಗೆ ಬಂದದ್ದೇಕೆ?
ನಟರಿರಲಿ, ಹಿರಿತೆರೆಯೇ ತೆರೆಮರೆಗೆ ಸರಿಯುತ್ತಿರುವುದೇ ಕಾರಣ.

## ಬಹುಮಾನಿತ ಪ್ರಶ್ನೆ

ವಿ. ಹಮೀದ್, ವಿಟ್ಲ
ವಿವಾಹದ ಮೊದಲು ಇದ್ದಷ್ಟು ಖುಷಿ ನಂತರ ಇರುವುದಿಲ್ಲವಲ್ಲಾ, ಏಕೆ?
'ನಾ ಗಿಣಿ' ಎಂದವಳು ನಾಗಿಣಿ ಆಗಲು ಕಾರಣಗಳು ದೊರಕಿರುತ್ತವಲ್ಲ!

ಜಗದೀಶ ಬಿ. ಹೊಸೂರು, ಮೈಸೂರು
ಪಾದಯಾತ್ರೆ ಮಾಡುವುದರಿಂದ ಕಾಲುಗಳಿಗೆ ಸಿಗುವ ಲಾಭವೇನು?
ಹೊಸ ಪಾದರಕ್ಷೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಒಂದೇ ಮನೆಯ ಹೆಣ್ಣುಗಳೆಲ್ಲ ಒಂದೇ ತರಹ ಇರುವುದಿಲ್ಲವೇಕೆ?
ಕಟ್ಟಿಕೊಂಡವನಿಗೆ ಕನ್‌ಫ್ಯೂಸ್ ಆಗದಿರಲೆಂದು.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕಾ
ಭಿಕ್ಷುಕರೂ ಮನಿಪೇ, ಗೂಗಲ್ ಪೇ ಅಂತಾರೆ. ಮುಂದೇನಾಗುತ್ತೆ?



ಭಿಕ್ಷುಕರು ಕಂಡಾಕ್ಷಣ 'ಕೊಡುಗೈ'ಯವರ ಮೊಬೈಲ್ ಸ್ವಿಚಾಫ್ ಆಗತ್ತೆ.

ಭಾರತೀ ಗಂಗಾಧರ್, ಬೆಂಗಳೂರು
ಗಿಣಿ ಕಚ್ಚಿದ ಹಣ್ಣು, ಕದ್ದು ಕೊಟ್ಟ ಮುತ್ತಿನಂತೆ ಕದ್ದು ಕೇಳುವ ಕಿವಿಯೇ ಸ್ವಾರಸ್ಯವಂತೆ?
'ಅಹುದಹುದು' ಎಂದವಂತೆ ಅಲೆಕ್ಸಾ, ನೆಸ್ಟ್ ಮಿನಿ, ಅಮೆಝಾನ್ ಎಕೋ, ಇತ್ಯಾದಿ.

ಜಯಶ್ರೀ, ಬೆಂಗಳೂರು
ಸನ್ಯಾಸಿ ಗ್ರೇಟಾ, ಬ್ರಹ್ಮಚಾರಿ ಗ್ರೇಟಾ?
ರುಚಿ ಕಾಣದವನಿಗಿಂತ ಎಲ್ಲ ಬಿಟ್ಟವನು ಗ್ರೇಟು – ಮೂರೂ ಬಿಟ್ಟವನಾಗದಿದ್ದರೆ!

ಕಾವ್ಯಶ್ರೀ, ಸುರಪುರ
ಮಾತಿನ ಸ್ಪರ್ಧೆಯಲ್ಲಿ ಗಂಡು ಗೆಲ್ತಾನೋ, ಹೆಣ್ಣೋ?
ವಿಷಯ 'ಹೆಂಡತಿ' ಎಂದಿದ್ದರೆ, ಗಂಡು; ಮಿಕ್ಕೆಲ್ಲ ವಿಷಯಗಳ ಸ್ಪರ್ಧೆಯಲ್ಲಿ ಹೆಣ್ಣು.

■ ರಾಮ್